**ದಿನಾಂಕಃ 08.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿಯ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ**

1. ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ಪ್ರಸ್ತುತ ಪ್ರಕರಣ ಅಲ್ಲದೆ ನಾನು ಸಿ.ಸಿ.3704/22 ಪ್ರಕರಣದಲ್ಲಿ ದೂರುದಾರನಾಗಿರುತ್ತೇನೆ ಎಂದರೆ ಸರಿ. ಸದರಿ ಕೇಸಿನ ಆರೋಪಿ ರೇವಮ್ಮ ಎಂದರೆ ಸರಿ. ಸದರಿ ಪ್ರಕರಣವನ್ನು 3 ½ ಲಕ್ಷಕ್ಕೆ ಸಲ್ಲಿಸಿರುತ್ತೇನೆ. ನಾನು ನಿವೃತ್ತ ಶಿಕ್ಷಕನಾಗಿದ್ದು ನನಗೆ ಪಿಂಚಣಿ ಬರುತ್ತದೆ. ನಾನು ನಿವೃತ್ತಿಯಾಗಿ 10 ವರ್ಷಗಳಾಗಿವೆ. ನನಗೆ ಒಟ್ಟು 42 ಸಾವಿರ ಪಿಂಚಣಿ ಬರುತ್ತದೆ. ಸದರಿ ಪಿಂಚಣಿಯಲ್ಲಿ 10–12 ಸಾವಿರ ಕಡಿತಗೊಳ್ಳುತ್ತದೆ.

2. ನಮ್ಮ ಮನೆಯಲ್ಲಿ ನಾನು ನನ್ನ ಹೆಂಡತಿ ಹಾಗೂ ಇಬ್ಬರು ಗಂಡು ಮಕ್ಕಳು ಇದ್ದಾರೆ. ನನ್ನ ಗಂಡು ಮಕ್ಕಳು ಮದುವೆಯಾಗಿ ಬೇರೆ ವಾಸವಾಗಿದ್ದಾರೆ. ಒಂದು ತಿಂಗಳು ನನ್ನ ಮನೆಯ ಖರ್ಚು 5,000/– ಇರುತ್ತದೆ.

3. ನನಗೆ ಒಟ್ಟು 3 ½ ಎಕರೆ ಜಮೀನಿದೆ. ಈ ಬಗ್ಗೆ ಆರ್.ಟಿ.ಸಿ ಸಲ್ಲಿಸಿರುತ್ತೇನೆ. ನಾನು ಸಲ್ಲಿಸಿರುವ ಆರ್.ಟಿ.ಸಿ ಯಲ್ಲಿ ಬರೆದಿರುವ ವಿಚಾರಗಳು ಸತ್ಯವಾಗಿವೆ. ನಿಪಿ.7 ಆರ್.ಟಿ.ಸಿ ಯಲ್ಲಿ ಬೀಳು ಜಮೀನು ಎಂದು ನಮೂದಾಗಿದೆ ಎಂದರೆ ಸರಿ. ಅದು ನನ್ನ ಜಮೀನಲ್ಲ 10 ಎಕರೆ ಸರಕಾರಿ ಜಮೀನು ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ.7 ಆರ್.ಟಿ.ಸಿ ನನಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ.

4. ಲೇಟ್ ವೆಂಕಟಶೆಟ್ಟಿ ಮಗ ಶೀನ ಶೆಟ್ಟಿ ಅಂದರೆ ನಾನೇ ಆಗಿರುತ್ತದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ಆರ್.ಟಿ.ಸಿ ಯಲ್ಲಿ ಶೀನಶೆಟ್ಟಿ ಅಲಿಯಾಸ್ ಶ್ರೀನಿವಾಸ ಬಿನ್ ವೆಂಕಟಪ್ಪ ಶೆಟ್ಟಿ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ.7 ಆರ್.ಟಿ.ಸಿ ಹಾಗೂ ನನಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಬೇರೆಯವರ ಆರ್.ಟಿ.ಸಿ. ತಂದು ನಾನು ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ

ಸರಿಯಲ್ಲ. ಸದರಿ ಆರ್.ಟಿ.ಸಿ ಯಲ್ಲಿ ಪಾಲುಪಾರಿಕತ್ ಎಂದು ನಮೂದಾಗಿದೆ ನನ್ನ ತಂದೆ ಹಾಗೂ ಅಣ್ಣ ತಮ್ಮಂದಿರು ಸದರಿ ಪಾಲುಪಾರಿಕತ್ ಅನ್ನು ನನ್ನ ಹೆಸರಿಗೆ ಬರೆದುಕೊಟ್ಟಿರುತ್ತಾರೆ. ಸದರಿ ಪಾಲುಪಾರಿಕತ್ ಹಾಜರುಪಡಿಸಲು ತೊಂದರೆ ಇಲ್ಲ.

**5.** ಸದರಿ ಜಮೀನಿನಲ್ಲಿ ಬಾಳೆ, ಶುಂಠಿ, ಜೋಳ ಹಾಗೂ ತರಕಾರಿ ಬೆಳೆಯುತ್ತೀವೆ. ಇದನ್ನು ಬಿಟ್ಟು ಬೇರೆ ಏನು ಬೆಳೆಯುವುದಿಲ್ಲ. ನಿಪಿ.7 ರಲ್ಲಿ ಮರಗೆಣಸು ಎಂದು ನಮೂದಾಗಿದೆ ಎಂದರೆ ಸರಿ. ಅದನ್ನು ಬೆಳೆದಿದ್ದೇವೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಸದರಿ ಜಮೀನಿನ ಮಾಲೀಕನಲ್ಲ ನಾನು ಯಾವುದೇ ಬೆಳೆ ಬೆಳೆಯುವುದಿಲ್ಲ ಎಂದರೆ ಸರಿಯಲ್ಲ.

**6.** ಪ್ರಸ್ತುತ ಪ್ರಕರಣದಲ್ಲಿ ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ದೂರಿನಲ್ಲಿ ನಾನು ನನ್ನ ಹಾಗೂ ಆರೋಪಿ ನಡುವೆ **3** ಲಕ್ಷ ವ್ಯವಹಾರ ಎಲ್ಲಿ ನಡೆಯಿತು ಎಂದು ಬರೆಯಿಸಿಲ್ಲ ಎಂದರೆ ನಾನು ಮನೆಯಲ್ಲಿ ಕೊಟ್ಟಿರುತ್ತೇನೆ ಆದರೆ ದೂರಿನಲ್ಲಿ ಅದು ಕೈಬಿಟ್ಟುಹೋಗಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ.

**7.** ನಾನು ಬ್ಯಾಂಕಿನ ವ್ಯವಹಾರ ಇಟ್ಟುಕೊಂಡಿರುವುದಿಲ್ಲ. ನಾನು ಕೇವಲ ಪಿಂಚಣಿ ಹಣವನ್ನು ಬ್ಯಾಂಕಿನಲ್ಲಿ ತೆಗೆದುಕೊಳ್ಳುತ್ತೇನೆ. ನಾನು ಶುಂಠಿ ಬೆಳೆದ ಹಣವನ್ನು ಆರೋಪಿಗೆ ಸಾಲ ನೀಡಿರುತ್ತೇನೆ. ನಾನು 2021-22 ರಲ್ಲಿ ಶುಂಠಿ ಬೆಳೆದಿದ್ದೆ. ಈ ವಿಷಯವನ್ನು ನನ್ನ ದೂರಿನಲ್ಲಿ ಬರೆಯಿಸಿರುವುದಿಲ್ಲ ಎಂದರೆ ಸರಿ.

8. ನಾನು 200 ರಿಂದ 250 ಮೂಟೆ ಶುಂಠಿಯನ್ನು 2021-22 ರಲ್ಲಿ ಬೆಳದಿದ್ದೆ. ಸದರಿ ಶುಂಠಿ ಬೆಳೆಯನ್ನು ಡಿಸೆಂಬರ್ ಹಾಗೂ ಜನವರಿ ತಿಂಗಳಲ್ಲಿ ಕಿತ್ತಿರುತ್ತೇನೆ. ತಲಾ ಒಂದು ಮೂಟೆಗೆ ರೂ.3,300/- ಮಾರಿರುತ್ತೇನೆ. ಸದರಿ ಶುಂಠಿಯನ್ನು ಕೇರಳದವರಿಗೆ ಮಾರಾಟ ಮಾಡಿರುತ್ತೇನೆ. ಸದರಿ ಮಾರಾಟ ಮಾಡಿರುವ ಚೀಟಿಯನ್ನು ಇಟ್ಟಿದ್ದೀರಾ ಎಂಬ ಪ್ರಶ್ನೆಗೆ ಇಟ್ಟಿದ್ದರೆ ತಂದುಕೊಡುತ್ತೇನೆ. ಶುಂಠಿ ಬೆಳೆಯಲು ನೀರು ಬೇಕು ಎಂದರೆ ಸರಿ.

9. ನನ್ನ ಆರ್.ಟಿ.ಸಿ ಯಲ್ಲಿ ಬೀಳು ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ದೂರಿನಲ್ಲಿ ನಾನು ಶುಂಠಿ ಬೆಳೆದು ಬಂದ ಹಣವನ್ನು ಮನೆಯಲ್ಲಿಟ್ಟಿದ್ದು ಅದನ್ನು ಆರೋಪಿಗೆ ಸಾಲ ಕೊಟ್ಟಿರುತ್ತೇನೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ನನ್ನ ದೂರಿನಲ್ಲಿ ಆರೋಪಿಗೆ ನೀಡಿರುತ್ತೇನೆ ಎಂದು ಹೇಳುವ ಹಣವನ್ನು ನಗದು ಅಥವಾ ಡಿ.ಡಿ. ಅಥವಾ ಚೆಕ್ ಮೂಲಕ ನೀಡಿರುತ್ತೇನೆ ಎಂಬುದನ್ನು ನಮೂದು ಮಾಡಿಲ್ಲ ಎಂದರೆ ಸರಿ. ನಾನು ನಗದು ರೂಪದಲ್ಲಿ ಹಣ ನೀಡಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಹಾಗಾದರೆ ನನ್ನ ಪ್ರಕಾರ ನಾನು ಉತ್ತರ ಹೇಳುತ್ತಿರುವುದು ಸತ್ಯ ದೂರಿನಲ್ಲಿ ನಮೂದಗಿರುವುದು ಸತ್ಯವಲ್ಲವಾ ಎಂಬ ಪ್ರಶ್ನೆಗೆ ಅದು ದೂರಿನಲ್ಲಿ ಬರೆಯುವಾಗಿ ಮಿಸ್ ಆಗಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ.

10. ನನಗೆ ಆರೋಪಿಗೆ ಸಾಲ ನೀಡುವಷ್ಟು ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನನಗೆ ಆರ್ಥಿಕ ಸಾಮರ್ಥ್ಯ ಇತ್ತು ಎಂದು ತೋರಿಸಲು ಯಾವುದೇ ಬ್ಯಾಂಕ್ ವ್ಯವಹಾರದ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಆದರೆ ಮನೆಯಲ್ಲಿಟ್ಟಿದ್ದ ಹಣವನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ.

11. ನಾನು ಸೇವೆಯಲ್ಲಿದ್ದಾಗ ಆದಾಯ ತೆರಿಗೆ ಪಾವತಿದಾರನಾಗಿದ್ದೆ ಎಂದರೆ ಸರಿ. ನಂತರ ನಾನು ನಿವೃತ್ತಿಯಾದ ಮೇಲೆ ಆದಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ. ನನ್ನ ಜಮೀನಿನಲ್ಲಿ ಬೋರ್ವೆಲ್ ಇದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

12. ಆರೋಪಿ ನನಗೆ 13.06.2022 ರಂದು ಮೊದಲು ಹಣವನ್ನು ಕೇಳಿರುತ್ತಾರೆ. ನಾನು ಅದೇ ದಿನ ಆರೋಪಿಗೆ ಹಣ ನೀಡಿರುತ್ತೇನೆ. ಆರೋಪಿ ನನ್ನ ಬಳಿ ದಿಃ 13.06.2022 ರಂದು ಹಣ ಕೇಳಿಲ್ಲ ಹಾಗೂ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನ ಮನೆಯಲ್ಲಿ ನನ್ನ ಹೆಂಡತಿ ಹಾಗೂ ಮಗ ಇದ್ದರು. ನನ್ನ ಹೆಂಡತಿ ಮಗನನ್ನು ಸಾಕ್ಷಿ ಮಾಡಿಸಲು ತೊಂದರೆ ಇಲ್ಲ.

13. ನನ್ನ ದೂರಿನಲ್ಲಿ ಯಾವ ದಿನಾಂಕ ಆರೋಪಿ ನನಗೆ ಚೆಕ್ ನೀಡಿರುತ್ತಾರೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ನನ್ನ ಬಳಿ ಆರೋಪಿ ಹಣಕಾಸಿನ ವ್ಯವಹಾರ ಮಾಡದೆ ಇದ್ದರಿಂದ ಸದರಿ ದಿನಾಂಕ ನನಗೆ ನೆನಪಿಲ್ಲ ಎಂದರೆ **13.06.2022** ರಂದು ಆರೋಪಿ ನನಗೆ ಚೆಕ್ ನೀಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ.

**14.** ನನ್ನ ಸಂಬಂಧಿಯೊಬ್ಬರು ಮೈಸೂರಿನಲ್ಲಿ ಪೊಲೀಸ ಆಗಿ ಸೇವೆ ಸಲ್ಲಿಸುತ್ತಿದ್ದಾರೆ ಎಂದರೆ ಸರಿ. ಆರೋಪಿ ಹಾಗೂ ಸ್ವಾಮಿ ಎಂಬುವವರು ಆತ್ಮೀಯ ಸ್ನೇಹಿತರು ಎಂದರೆ ಇರಬಹುದು. ಪ್ರಸ್ತುತ ಆರೋಪಿ ಸದರಿ ಸ್ವಾಮಿ ಅವರ ಬಳಿ ಲೇವಾದೇವಿ ವ್ಯವಹಾರ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಾಲವನ್ನು ಆರೋಪಿ ಸ್ವಾಮಿ ಅವರಿಗೆ ತೀರಿಸಿದ್ದರು ಕೂಡ ಸದರಿಯವರು ದುರುದ್ದೇಶದಿಂದ ಇಂದು ನಾಳೆ ಚೆಕ್ ಹಿಂದಿರುಗಿಸುತ್ತೇನೆ ಎಂದು ಹಿಂದಿರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಚೆಕ್ ಅನ್ನು ಸ್ವಾಮಿ ಅವರು ನನ್ನ ಸಂಬಂಧಿಯಾದ್ದರಿಂದ ನಾನು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ದೂರಿನಲ್ಲಿ ಕೇಳಿದ ಹಾಗೆ ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಇಂಗ್ಲೀಷ್ ಓದಲು-ಬರೆಯಲು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕನ್ನಡ ಬರುತ್ತದೆ ಅಷ್ಟು ಮಾತ್ರ ಗೊತ್ತು ಎಂದು ಸಾಕ್ಷಿ ನುಡಿಯುತ್ತಾರೆ.

**ಮುಂದುವರಿದ ಪಾಟೀಸವಾಲುಃ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.